# ವಾರ್ತಾ ವಿಶ್ಲೇಷಣೆ

## ಮಾನವನ ವೈಶಿಷ್ಟ್ಯ

'ಮಾನವ ಜನ್ಮ ದೊಡ್ಡದೊ' ಎಂದು ದಾಸರು ಹಾಡಿದ್ದಾರೆ. ಸೃಷ್ಟಿಯಲ್ಲೆಲ್ಲ ಅತ್ಯಂತ ಶ್ರೇಷ್ಠನು ಮಾನವನೆಂದು ಸ್ವಾಮಿ ವಿವೇಕಾನಂದರೂ ಹೇಳುತ್ತಾರೆ. ಸೃಷ್ಟಿಯಲ್ಲಿ ಜೀವಕೋಶದ ವಿಕಾಸ ಅತ್ಯಂದ ವಿಶಿಷ್ಟವಾದುದು. ಜೀವಕೋಶಗಳಿಗೆ ಹೊರಗಿನ ವಾತಾವರಣದ ಪ್ರಜ್ಞೆ ಇರುತ್ತದೆಯಂತೆ. ವಿಕಾಸವು ಮಾನವನ ಹಂತ ತಲುಪಿದಾಗ ಬಾಹ್ಯಪ್ರಜ್ಞೆಯ ಜೊತೆಗೆ ಆತ್ಮಪ್ರಜ್ಞೆಯೂ ಸೇರಿ ಕೊಳ್ಳುತ್ತದೆ. ಇದೇ ಮಾನವನನ್ನು ಸರ್ವಶ್ರೇಷ್ಠನನ್ನಾಗಿಸುತ್ತದೆ. ಇದು ಅವನು ತನ್ನ ನೈಜ ಆಧ್ಯಾತ್ಮಿಕ ಸ್ವರೂಪವನ್ನು ಅರಿಯಲು, ತನ್ನ ಜೈವಿಕ ಅಸ್ತಿತ್ವವನ್ನು ಮೀರಿಹೋಗಲು ಅನುವು ಮಾಡಿ ಕೊಡುತ್ತದೆ.

ಆದರೆ ಮಾನವನಿಗೆ ಒಂದು ಆಧ್ಯಾತ್ಮಿಕ ಆಯಾಮವಿದೆಯೇ ಎಂಬುದು ಪ್ರಶ್ನೆ. ಇಂದಿನ ಜೆನೆಟಿಕ್ ವಿಜ್ಞಾನ ಮಾನವ ರಹಸ್ಯವನ್ನು ಸಂಪೂರ್ಣ ಅರಿಯಬಹುದೆಂದು ಸಾರುತ್ತದೆ. ಈಗ ವಿಜ್ಞಾನಿಗಳು ಜೆನೆಟಿಕ್ ಕೋಡ್ ಅನ್ನು ಪೂರ್ಣಪ್ರಮಾಣದಲ್ಲಿ ಓದಲು ಸಮರ್ಥ ರಾಗಿದ್ದಾರೆ. ಇದುವರೆಗೂ ಜೀನ್ ಪೂರ್ಣ ರಹಸ್ಯಾತ್ಮಕವಾಗಿತ್ತು.

ಜೀನ್‌ನಲ್ಲಿ ಇಡೀ ಜೀವವಿಕಾಸದ ಚರಿತ್ರೆಯೆಲ್ಲವೂ ರಿಕಾರ್ಡ್ ಆಗಿರುತ್ತದೆ. ಈ ರಿಕಾರ್ಡನ್ನು ಜಿನೋಮ್ ಎಂದು ಕರೆಯುತ್ತಾರೆ. ಜಿನೋಮ್ ಅನ್ನು ಒಂದು ಪುಸ್ತಕಕ್ಕೆ ಹೋಲಿಸಬಹುದು. ಈ ಪುಸ್ತಕ ೮೦೦ ಬೈಬಲ್‌ಗಳಷ್ಟು ಉದ್ದವಾಗಿದೆಯಂತೆ. ಆದರೆ ಅದು ಎಷ್ಟು ಚಿಕ್ಕದಾಗಿದೆಯೆಂದರೆ ಪ್ರತಿಯೊಬ್ಬರಲ್ಲಿಯೂ ಟ್ರಿಲಿಯನ್‌ಗಟ್ಟಳೆ ಪ್ರತಿಗಳಿವೆಯಂತೆ.

ಇದು ಪ್ರಸಿದ್ಧ ಮನಶ್ಶಾಸ್ತ್ರಜ್ಞರಾದ ಸಿ.ಜಿ.ಯುಂಗ್‌ರ **ಸಾಮೂಹಿಕ ಅಪ್ರಜ್ಞೆ** (*Collective Unconscious*)ಯ ಕಲ್ಪನೆಯನ್ನು ಮನಸ್ಸಿಗೆ ತರುತ್ತದೆ. ಯುಂಗರ ಪ್ರಕಾರ ಸಾಮೂಹಿಕ ಅಪ್ರಜ್ಞೆಯಲ್ಲಿ ಇಡೀ ಮಾನವ ಜನಾಂಗದ ಪೂರ್ಣ ಇತಿಹಾಸವು ಸಂಗ್ರಹಿಸಲ್ಪಟ್ಟಿರುತ್ತದೆ. ಹಾಗೆಯೇ ಯೋಗಶಾಸ್ತ್ರದಲ್ಲಿ ಕರ್ಮಾ ಶಯದ ಭಾವನೆ ಇದೆ. ಇದರಲ್ಲಿ ಜನ್ಮ ಜನ್ಮಾಂತರಗಳ ಎಲ್ಲ ಸಂಸ್ಕಾರಗಳೂ ಸಂಗ್ರಹವಾಗಿರುತ್ತವೆ.

ಇದೆಲ್ಲವೂ ಮಾನವನ ಮಾನಸಿಕ ಪ್ರಪಂಚಕ್ಕೆ ಸೇರಿದುದು. ವೇದಾಂತದ ಪ್ರಕಾರ ಮನಸ್ಸೂ ಪ್ರಕೃತಿಯ ಅಂಶ. ಆದ್ದರಿಂದ ಮಾನವನೆಂದರೆ ಕೇವಲ ಜೀನುಗಳಷ್ಟೇ ಅಲ್ಲ. ಅವಕ್ಕೂ ಮೀರಿದ ಅಂಶವೊಂದಿದೆ. 'ಜೆನೆಟಿಕ್ ಕೋಡನ್ನು ಮೀರಿದ ಬಹಳಷ್ಟು ಅಂಶ ನಮ್ಮಲ್ಲಿದೆ' ಎನ್ನುತ್ತಾರೆ ಮ್ಯಾಟ್ ರಿಡ್ಲೀ ಎಂಬ ಸುಪ್ರಸಿದ್ಧ ಜೆನೆಟಿಕ್ ವಿಜ್ಞಾನಿ. ಆ ಅಂಶ ಯಾವುದು? ಆಧ್ಯಾತ್ಮಿಕವೆ? ❀

## ಧರ್ಮದ ಅಧ್ಯಯನ.

ಸೆಕ್ಯುಲರ್ ಸ್ಟೇಟ್‌ನಲ್ಲಿ ಧರ್ಮದ ಅಧ್ಯಯನವೇ! —ಎಂದು ನೀವು ಆಶ್ಚರ್ಯ ಪಡಬಹುದು. ಭಾರತದಲ್ಲಲ್ಲ, ಅಮೆರಿಕದಲ್ಲಿ. ಅಲ್ಲಿಯ ಕ್ಯಾಲಿಫೋರ್ನಿಯಾ ಶಾಲೆಗಳು ಈ ವಿಷಯದಲ್ಲಿ ಅಗ್ರಗಾಮಿಗಳಾಗಿವೆಯಂತೆ. ಧರ್ಮವನ್ನು ಚಾರಿತ್ರಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬೇಕೆಂದು ಅಲ್ಲಿಯ ಶಿಕ್ಷಣ ತಜ್ಞರು ಅಭಿಪ್ರಾಯಪಡುತ್ತಾರೆ. ಧರ್ಮದ ಅಧ್ಯಯನದ ಆವಶ್ಯಕತೆಯನ್ನು ಅವರು ಮನಗಂಡಿದ್ದಾರೆ. ಎಲ್ಲ ಧರ್ಮಗಳಿಗೂ ಮಾನ್ಯತೆಯನ್ನಿತ್ತು, ಯಾವ ಧರ್ಮಾನುಯಾಯಿಗಳಿಗೂ ನೋವಾಗದಂತೆ ಈ ಅಧ್ಯಯನ ನಡೆಯಬೇಕೆಂದು ಅದಕ್ಕನುಸಾರವಾಗಿ ಕೆಲವು ಮಾರ್ಗದರ್ಶನ ಸೂತ್ರಗಳನ್ನು ಶಿಕ್ಷಣ ತಜ್ಞರು ನೀಡಿದ್ದಾರೆ. ಇದರ ಮುಖ್ಯ ಉದ್ದೇಶ ಆಧ್ಯಾತ್ಮಿಕ ದೃಷ್ಟಿಯಿಂದ ವಿದ್ಯಾರ್ಥಿಗಳು ಜಗತ್ತನ್ನು ಅರ್ಥಮಾಡಿಕೊಳ್ಳುವಂತೆ ಮಾಡುವುದು.

ಮಾನವನ ಬುದ್ಧಿಶಕ್ತಿಯೆಲ್ಲಾ ಕೇವಲ ತಾಂತ್ರಿಕತೆಯ ವಾಣಿಜ್ಯದ ಕಡೆಗೇ ಹರಿಯುತ್ತಿರುವ ಈ ಸಂದರ್ಭದಲ್ಲಿ ಧರ್ಮದ ಅಧ್ಯಯನದ ಕಡೆಗೆ ಗಮನ ಹರಿಸುತ್ತಿರುವುದು ತುಂಬ ವಿಶೇಷ ವೆನಿಸುತ್ತದೆ. ಧರ್ಮ ಮಾನವನನ್ನು ಬಿಟ್ಟುಹೋಗದು. '೨೦ನೆ ಶತಮಾನದ ಅತ್ಯಂತ ಅಸಾಧಾರಣ ವಿಷಯವೇನೆಂದರೆ ಭಗವಂತನ ಇಲ್ಲದಿರುವಿಕೆ ಅಸಂಭವವಾದುದು. ಜನಸಾಧಾರಣ ಧಾರ್ಮಿಕ ನಂಬಿಕೆ—ವಿಶೇಷವಾಗಿ ವಿದ್ಯಾವಂತ ಮತ್ತು ಶ್ರೀಮಂತ ವರ್ಗ ದಲ್ಲಿ—ಕುಸಿದು ಬೀಳುತ್ತದೆ ಎಂದು ಪೂರ್ಣ ಭರವಸೆಯಿಂದ ಭವಿಷ್ಯ ನುಡಿಯಲಾಗಿತ್ತು. ಆದರೆ ಅದು ಸಂಭವಿಸಲೇ ಇಲ್ಲ. ಹೇಗೋ ಭಗವಂತನು ಉಳಿದಿರುವನು, ಅಷ್ಟೇ ಅಲ್ಲ, ಉಚ್ಛ್ರಾಯ ಹೊಂದುತ್ತಿರುವನು.'—ಪಾಲ್ ಜಾನ್‌ಸನ್ (*ರೀಡರ್ಸ್ ಡೈಜೆಸ್ಟ್* ನಿಂದ) ಧರ್ಮವು ಮಾನವಜೀವನಕ್ಕೆ ಅತ್ಯಂತ ನಿಕಟವಾದ ವಿಷಯ—ಮಾನವನ ಅಂತರಂಗವನ್ನು ಸ್ಪರ್ಶಿಸುವಂತಹುದು. ಬೇರೆ ಲ್ಲವೂ ಮಾನವನ ಬಾಹ್ಯಜೀವನಕ್ಕೆ ಸಂಬಂಧಿಸಿದುದು. ಅಂತ ರಂಗದ ಪರಿವರ್ತನೆಯಾಗದೆ ಬಾಹ್ಯ ಅಭಿವೃದ್ಧಿ ಎಷ್ಟೇ ಆದರೂ ಅದು ಮನುಷ್ಯನನ್ನು ಸುಖಿಯನ್ನಾಗಿ ಮಾಡದು. ವಿಶಾಲಾರ್ಥದಲ್ಲಿ, ಮತೀಯ ಗೊಂದಲವಿಲ್ಲದೆ, ಧರ್ಮವನ್ನು ಅಧ್ಯಯಿಸುವುದರಿಂದ ನಮ್ಮ ಮತ್ತು ಇತರರ ಬಗೆಗಿನ ತಿಳಿವಳಿಕೆ ಅಧಿಕವಾಗುತ್ತದೆ. ಇದರಿಂದ ಮಾನವೀಯ ಸಂಬಂಧ ಉತ್ತಮಗೊಳ್ಳುವುದರಲ್ಲಿ ಸಂಶಯವಿಲ್ಲ. ಈ ವಾಣಿಜ್ಯ ಪ್ರಧಾನ ತಾಂತ್ರಿಕ ಯುಗದಲ್ಲಿ ಮಾನ ವೀಯ ಸಂಬಂಧಗಳಿಗೆ ಬೆಲೆಯೇ ಇಲ್ಲವಾಗಿದೆ. ಇಂತಹ ಸಂದರ್ಭ ದಲ್ಲಿ ಧರ್ಮದ ಬೋಧನೆಯ ಮೂಲಕ ಈ ಮಾನವೀಯ ಸಂಬಂಧ ವನ್ನು ಉತ್ತಮಗೊಳಿಸುವ ಪ್ರಯತ್ನ ಸ್ತುತ್ಯಾರ್ಹ. ❀